ಮಾಡಿದ್ದಾರೆ. ಯಾವುದು ಆಗುವುದಿಲ್ಲ. ಅದನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳಿಸಿ ಅದನ್ನು ನಾವು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಪಾಟೀಲ್‌ರವರು ಏನು ಹೇಳಿದ್ದಾರೆ. ಇದನ್ನು ನಾನು ಮತ್ತು ಸಂಬಂಧಪಟ್ಟ ಮಂತ್ರಿಗಳು ಕುಳಿತು ಅವರನ್ನೂ ಕರೆಸಿ ಆ ಸಮಸ್ಯೆಗೆ ಆದಷ್ಟು ಬೇಗ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಒಂದು ದಿನದ್ದು ಸಮಸ್ಯೆಯಲ್ಲ ಬಹಳ ದಿನಗಳಿಂದ ಇರತಕ್ಕದ್ದು, ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕನಾಯಕನ ಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಯಲ್ಲಿ ಸರ್ಕಾರಿ ಪದವಿ ಕಾಲೇಜು, ಸರ್ಕಾರಿ ಕಿರಿಯ ಕಾಲೇಜು ಕಟ್ಟಡದಲ್ಲಿ ನಡೆಯುತ್ತಿತ್ತು. ಈಗ ಮಾನ್ಯ ಗೋವಿಂದೇಗೌಡರ ಆದೇಶದಂತೆ ಕಿರಿಯ ಕಾಲೇಜನ್ನು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 4.30ರವರೆಗೆ ನಡೆಸಬೇಕು ಎಂದು ಹೇಳಿ ಸರ್ಕಾರ ತೀರ್ಮಾನ ಮಾಡಿದೆ. ಹಾಗೆ ತೀರ್ಮಾನ ಮಾಡಿರುವುದರಿಂದ ಸರ್ಕಾರೀ ಪದವಿ ಪೂರ್ವ ಕಾಲೇಜು ನಡೆಸಲಿಕ್ಕೆ ಕಟ್ಟಡವೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ 1992-93ನೇ ಇಸವಿಯಿಂದ ಪ್ರಥಮ ದರ್ಜೆ ಕಾಲೇಜು ಕಟ್ಟಡ ಅರ್ಧ ಆಗಿ ಉಳಿದಿದೆ. ಈ ಕಟ್ಟಡ ಏನಾದರೂ ಕಂಪ್ಲೀಟ್ ಮಾಡಿ ಕೊಡುತ್ತೀರಾ? ಏಕೆಂದರೆ ಪದವಿ ಪೂರ್ವ ಕಾಲೇಜಿನ ಎ ಮಕ್ಕಳೂ ಶಾಲೆಗೆ ಹೋಗಲಿಕ್ಕೆ ತೊಂದರೆ ಆಗಿ, ಕಾಲೇಜನ್ನೇ ಆರಂಭ ಮಾಡಿಲ್ಲ. ಅಲ್ಲಿ ಸೈನ್ಸ್ ಫ್ಯಾಕಲ್ಟಿ ಕೂಡ ಆರಂಭ ಆಗಿದೆ. ಕನಿಷ್ಟ ಮೂರು ರೂಮ್ 1992-93ರಲ್ಲಿ ಆರಂಭ ಆಗಿತ ಏನಾದರೂ ಮಾಡಿ, ಅರ್ಧ ರೂಫ್ ಆಗಿದೆ. ಒಂದು ರೂಮಿನಲ್ಲಿ ಅರ್ಧ ರೂಫ್ ಹಾಕಿ ಬಿಟ್ಟಿದ್ದಾರೆ ನಾವೇನಾದರೂ ಕೇಳಿದರೆ ಎಲ್ ಓಸಿ ಕೊಡುವುದಿಲ್ಲ ನಾವು ಕಷ್ಟಪಟ್ಟು ಎಲ್ ಓಸಿ ತೆಗೆದುಕೊಂಡು ಬರುತ್ತೇವೆ, ನಮ್ಮ ಪ್ರಿಯಾರಿಟೀಸ್ ಬೇರೆ ಎಂದು ಅಲ್ಲಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಹೇಳುತ್ತಾರೆ ಆ ಪ್ರಿಯಾರಿಟಿ ಏನಾದರೂ ಶಿಫ್ ಮಾಡಿ ಈ ಕಾಲೇಜು ಕಟ್ಟಡವನ್ನು ಕಂಪ್ಲೀಟ್ ಮಾಡಿಸಿಕೊಂಡುತ್ತೀರಾ ಮತ್ತು ಮಕ್ಕಳು ಏನಾದರೂ ರೋಡಿಗೆ ಇಳಿಯುವುದನ್ನು ತಪ್ಪಿಸುತ್ತೀರಾ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.

4.10 ಪಿಎಂ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್‌ಒಸಿ ರಿಲೀಸ್ ಮಾಡುವುದರಲ್ಲಿ ಯಾರೂ ಸಹಿತ ಕಷ್ಟಪಡ ಅವಶ್ಯಕತೆ ಇಲ್ಲ. ಸರ್ಕಾರ ತನ್ನ ಬಜೆಟ್‌ನಲ್ಲಿ ಹೇಳಿರುವುದು ಕೇವಲ ಒಂದು ಎಸ್ಟಿಮೇಟ್, ಬಿಡುಗಡೆ ಮಾಡುವುದು ಫಂಡ್ ಅವೇಲಬಿಲಿಟಿ ಮೇಲೆ ಡಿಪೆಂಡ್ ಆಗುತ್ತದೆ. ಮಾಧುಸ್ವಾಮಿಯವರ ಜಿನೈನ್ ಪ್ರಾಬ್ಲಂ ಬಿಲ್ಡಿಂಗ್ ಪ್ರಾಬ್ಲಂ, ಅದು ಅರ್ಧಕ್ಕೆ ನಿಂತುಹೋಗಿದೆ. ಅವರಿಗೆ ಮುಖ್ಯವಾಗಿ ಬೇಕಾಗಿರುವುದು ಹಣಕಾಸು ಸಚಿವರು ಸ್ವಲ್ಪ ಹಣ ಬಿಡುಗಡೆ ಮಾಡಿದರೆ ರೂಫ್ ಹಾಕಿ ಅದನ್ನ ಕಂಪ್ಲೀಟ್ ಮಾಡಿದರೆ ಜ್ಯೂನಿಯರ್ ಫಸ್ಟ್‌ಗ್ರೇಡ್ ಕಾಲೇಜು ನಡೆಯಬಹುದು ಎನ್ನತಕ್ಕಂಥಾ ಇದೆ. ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಮ್ಮ ಹಣ ಇತಿಮಿತಿಯಲ್ಲಿ ಅವಶ್ಯಕತೆ ಎಷ್ಟು ಎಂಬುದನ್ನು ತಿಳಿದುಕೊಂಡು ಆದಷ್ಟೂ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.